


ಮಗಳು ದೇಬಲೀನಾ ಮುಖೋಪಾಧ್ಯಾಯ್ ಜೊತೆಗೆ ಕವಿಶೈಲದಲ್ಲಿ ಚಿತ್ರ: ಕುವೆಂಪು ಪ್ರತಿಷ್ಠಾನ

ನಿರಾಸೆಯಾಗುತ್ತದೆ. ಹಾಗೆಯೇ, ಪ್ರಶಸ್ತಿಯ ಆಸೆಯಿಂದ ಏನನ್ನೂ ಬರೆಯಬಾರದು. ಆತ್ಮತೃಪ್ತಿಯೊಂದೇ ಬರವಣಿಗೆಯ ಉದ್ದೇಶವಾಗಿರಬೇಕು. ಇಲ್ಲದಿದ್ದರೆ, ಪ್ರಶಸ್ತಿ ಹಾಗೂ ಜನಪ್ರಿಯತೆಯ ಹಿಂದೆ ಓಡುವ ನಮ್ಮ ಓಟಕ್ಕೆ ಕೊನೆಯೇ ಇರುವುದಿಲ್ಲ. ‘ನೊಬೆಲ್’ ದೊರಕಿದರೂ ಅದಕ್ಕಿಂತಲೂ ದೊಡ್ಡ ಪುರಸ್ಕಾರ ಬೇರೆ ಯಾವುದಾದರೂ ಇರಬಹುದೇ ಎನ್ನುವ ಹುಡುಕಾಟದಲ್ಲಿ ನಾವಿರುತ್ತೇವೆ.

ನಾನೂ ಇಂಗ್ಲಿಷ್‌ನಲ್ಲಿ ಬರೆಯಬಲ್ಲೆ. ಆದರೆ ಇಂಗ್ಲಿಷ್‌ನಲ್ಲಿ ಬರೆದ ಮಾತ್ರಕ್ಕೆ ನಾನು ‘ಪ್ರಭಾವಶಾಲಿ’ ಆಗಿಬಿಡುತ್ತೇನೇನು? ಬಂಗಾಳಿ ಬರವಣಿಗೆ, ಸಾಹಿತ್ಯ ಲೋಕ ನನಗೆ ತೃಪ್ತಿ ನೀಡಿದೆ. ಬಂಗಾಳಿ ಓದುಗರ ಪ್ರೀತಿಗೆ ಶರಣಾಗಿದ್ದೇನೆ. ಈ ಜನ್ಮಕ್ಕೆ ನನಗೆ ಇಷ್ಟು ಸಾಕು.

◆ **ನೀವು ಬರೆದಿರುವ ಕಾದಂಬರಿಗಳನ್ನು ಆಧರಿಸಿ ಇಪ್ಪತ್ತಕ್ಕೂ ಅಧಿಕ ಚಲನಚಿತ್ರಗಳು ತಯಾರಾಗಿವೆ; ಜನಪ್ರಿಯವೂ ಆಗಿವೆ. ಒಬ್ಬರು ಲೇಖಕರಾಗಿ ಸಿನಿಮಾ ವೀಕ್ಷಣೆ ನಿಮಗೆ ಎಷ್ಟು ಇಷ್ಟ? ನಿಮ್ಮ ಕಥೆಯನ್ನು ಆಧರಿಸಿ ತಯಾರಾದ ಚಿತ್ರಗಳನ್ನು ನೋಡಿದ್ದೀರಾ? ಸಿನಿಮಾಗಳಿಗೆ ಚಿತ್ರಕಥೆ, ಸಂಭಾಷಣೆ ಬರೆಯುವುದಕ್ಕೆ ನೀವು ಏಕೆ ಆಸಕ್ತಿ ತೋರಿಸಿಲ್ಲ?**

ಸಾಮಾನ್ಯವಾಗಿ ನಾನು ಸಿನಿಮಾ ನೋಡುವುದಕ್ಕೆ ಹೋಗುವುದಿಲ್ಲ. ನನ್ನ ಕಥೆಯನ್ನು ಆಧರಿಸಿದ ಸಿನಿಮಾಗಳನ್ನೂ ಕೂಡ! ಕೆಲವೊಮ್ಮೆ ಮನೆಯ ಸದಸ್ಯರ ಒತ್ತಾಯಕ್ಕೆ ಹೋಗುವುದಿದೆ; ಅದು ಬೇರೆ ಮಾತು. ಏಕೆಂದರೆ ಸಿನಿಮಾ ಬೇರೊಂದು ಮಾಧ್ಯಮ. ನನ್ನ ಕಾದಂಬರಿ ಆಧರಿಸಿ ಸಿನಿಮಾ ನಿರ್ಮಿಸುವಾಗ ಕೆಲವು ಬದಲಾವಣೆಗಳನ್ನು ಮಾಡಲಾಗುತ್ತದೆ. ಅದು ಅನಿವಾರ್ಯವೂ ಆಗಿರಬಹುದು. ಸತ್ಯಜಿತ್ ರೇ ಅವರ ‘ಪಥೇರ್ ಪಾಂಚಾಲಿ’ಯನ್ನೇ ತೆಗೆದುಕೊಳ್ಳಿ. ಅದು ಕಥೆಗಾರ ವಿಭೂತಿಭೂಷಣ ಬಂದ್ಯೋಪಾಧ್ಯಾಯ ಅವರ ಕಾದಂಬರಿಗಿಂತ ತುಂಬಾ ಭಿನ್ನವಾಗಿದೆ. ಕಾದಂಬರಿಯಲ್ಲಿ ಕಥೆ ಹೇಳುವ ವಿಧಾನಕ್ಕೂ ಸಿನಿಮಾದಲ್ಲಿ ಕಥೆಯನ್ನು ಪ್ರಸ್ತುತಪಡಿಸುವ ವಿಧಾನಕ್ಕೂ ಅನೇಕ ವ್ಯತ್ಯಾಸಗಳಿವೆ. ಲೇಖಕನಾಗಿ ಇಂತಹ ಪರಿವರ್ತನೆಗಳಿಗೆ ಅನುಮತಿ ನೀಡಲೇಬೇಕಾಗುತ್ತದೆ. ನನಗೆ ಸಿನಿಮಾದಲ್ಲಿನ ಕೆಲವು ಅಂಶಗಳು ರುಚಿಸುವುದಿಲ್ಲ. ಕೆಲವೊಮ್ಮೆ ಸಿನಿಮಾ ಮತ್ತು ಕಥಾಸಾಹಿತ್ಯದ ನಡುವೆ ಹೊಂದಾಣಿಕೆ ಇಲ್ಲವೇನೋ ಅನ್ನಿಸುತ್ತದೆ. ಸಾಹಿತ್ಯದಲ್ಲಿನ ಕೆಲವು ಒಳನೋಟಗಳು ಸಿನಿಮಾಗಳಲ್ಲಿ ಇಲ್ಲದೇ ಇರಬಹುದು. ಅದೇ ರೀತಿಯಲ್ಲಿ ಸಾಹಿತ್ಯವು ಹಲವು ವಿಷಯಗಳಲ್ಲಿ ಸಿನಿಮಾದಷ್ಟು ಪ್ರಭಾವಶಾಲಿ ಆಗದಿರಲೂಬಹುದು.

ಸಿನಿಮಾಗಳಿಗೆ ಚಿತ್ರಕಥೆ, ಸಂಭಾಷಣೆ ಬರೆಯುವ ಬಗ್ಗೆ ಹಲವರು ನನ್ನ ಬಳಿ ಕೇಳಿದ್ದಾರೆ; ಒತ್ತಾಯಿಸಿದ್ದಾರೆ. ನನಗ್ಯಾಕೋ ಈ ವಿಷಯದಲ್ಲಿ ಆಸಕ್ತಿ ಮೂಡಿಲ್ಲ. ನನ್ನ ಮಿತ್ರರಾದ ಸುನೀಲ್ ಮತ್ತು ದಿವ್ಯೇಂದು ಚಲನಚಿತ್ರಗಳಿಗೆ ಸಂಭಾಷಣೆ ಬರೆಯುತ್ತಿದ್ದಾರೆ. ನನಗೆ